# ಗಂಟು ಸಿದ್ಧಾಂತದ ಅನುಬಂಧ

**'ಅಟ್ ರೈಟ್ ಆಂಗಲ್ಸ್'** ಗಂಟು ಸಿದ್ಧಾಂತವನ್ನು ಚರ್ಚಿಸುವ ಸಲುವಾಗಿ ರಮ್ಯಾರನ್ನು ಭೇಟಿ ಮಾಡಿತು. ಸ್ಟಾರ್ಬಕ್ಸ್ ನಲ್ಲಿ ಕಾಫಿ ಹೀರುತ್ತಾ, ನಾನು ಗಂಟು ಸಿದ್ಧಾಂತವು ಸಿಕ್ಕುಗಳನ್ನು ಬಿಡಿಸಲು ಸಹಾಯಕವಾಗುವುದೇ ಎಂದು ಕಂಡುಹಿಡಿಯಲೆಂದು ನನ್ನೊಡನೆ ಕೊಂಡೊಯ್ದಿದ್ದ ಉಣ್ಣೆಯ ದಾರದ ಉಂಡೆಯ ಸಿಕ್ಕುಗಳ ಗೋಜಲುಗಳನ್ನು, ರಮ್ಯಾ ಸುಲಭವಾಗಿ ಅರ್ಥೈಸಿದರು.

ಸುಪರಿಚಿತ ಆಕಾರದಲ್ಲಿ ತ್ರಿದಳವು ಹೀಗೆ ಕಾಣುತ್ತಿತ್ತು:



ಚಿತ್ರ 1. ತ್ರಿದಳ (ರಮ್ಯಾರವರು ಬರೆದ ಚಿತ್ರ ಪಕ್ಕದಲ್ಲಿದೆ)

ಮತ್ತು ಈಗ, ಉಣ್ಣೆಯನ್ನು ಕೊಂಚ ಸಡಿಲಗೊಳಿಸಿದ ನಂತರ:



ಚಿತ್ರ 2. ತ್ರಿದಳ

ಕೊಂಚ ಅತ್ತಿತ್ತ ಚಿವುಟಿದ ನಂತರ, ವಾಹ್! ಇದೋ ಅದೇ ಗಂಟಿನ ಮತ್ತೊಂದು ದೃಶ್ಯ



ಚಿತ್ರ 3. ತ್ರಿದಳ

ಪ್ರತಿ ಚಿತ್ರದಲ್ಲೂ 3 ದಾಟು (ಕ್ರಾಸಿಂಗ್) ಗಳನ್ನು ಗಮನಿಸಿ.

ಈಗ ಎರಡು ಗಂಟಿನ ಸರದಿ:

5 ದಾಟುಗಳಿರುವ ನಕ್ಷತ್ರಾಕಾರವನ್ನು ನೋಡಿ:



ಚಿತ್ರ 4. ಪಂಚದಳ



ಚಿತ್ರ 5. ಪಂಚದಳ

ಗಂಟಿನ ಮಾತುಕತೆಯಲ್ಲಿ ತೊಡಗಿ ತಮ್ಮ ಉತ್ಪನ್ನಗಳನ್ನು ನಾವು ಕಡೆಗಣಿಸಿದ್ದನ್ನು ಸ್ಟಾರ್ಬಕ್ಸ್ ಇಷ್ಟ ಪಡದಿರಬಹುದು, ಆದರೆ ನಾನು ನನ್ನ ಉಣ್ಣೆಯ ಸಿಕ್ಕುಗಳನ್ನು ಬಿಡಿಸಲು ಬಯಸದೆ ಕಾಫಿಯನ್ನೂ ಕಡೆಗಣಿಸಿ ಹೊರಟುಬಿಟ್ಟೆ – ವಾಸ್ತವವಾಗಿ ನಾನು ಅದನ್ನು ಇನ್ನೂ ಗೋಜಲು ಮಾಡಲು ಬಯಸಿದ್ದೆ.



ವಿ.ಸೂ. ಗಂಟು ಸಿದ್ಧಾಂತ ಮತ್ತು ಡಿಎನ್‌ಎಗಳ ಬಗ್ಗೆ ಒಂದು ಸರಳವಾದ ಅಧ್ಯಯನಕ್ಕಾಗಿ ಈ ಕೆಳಕಂಡ ಕೊಂಡಿಯನ್ನು ನೋಡಿರಿ ಎಂದು ರಮ್ಯಾ ಸೂಚಿಸುತ್ತಾರೆ. ಕೊಂಡಿ: http://www.tiem.utk.edu/~gross/bioed/webmodules/DNAknot.html